

ಕೊಲ್ಲೂರಿನ ಬಳಿಯ ಕಾಡ ನಡುವೆ ಇರುವ ಗುಪ್ತಸುಂದರಿ 'ಅರಿಶಿನಗುಂಡಿ ಜಲಪಾತ'. ಅಷ್ಟೆತ್ತರದಿಂದ ಬಳಕುತ್ತ ಜಿಗಿಯುವ ಈ ಜಲಪಾತದ ಪಾದದ ಬಳಿ ನಿಂತುಕೊಳ್ಳುವುದು ಎಷ್ಟು ಖುಷಿಕೊಡುತ್ತದೆಯೋ, ಸುಮಾರು ಎಂಟು ಕಿಲೋಮೀಟರ್ ದೂರ ದಟ್ಟ ಕಾಡಿನಲ್ಲಿ ಸಾಗುವ ಟ್ರೆಕ್ಕಿಂಗ್ ಕೂಡ ಅಷ್ಟೇ ಹಿತ ನೀಡುತ್ತದೆ.

ಶ್ರೀವತ್ಸ ಜೇಬಿನಿಂದ ಕರವಸ್ತ್ರ ತೆಗೆದು ಮುಖ ಒರೆಸಿಕೊಳ್ಳುತ್ತ 'ಅಲ್ರೋ, ಇದು ನಿಜವಾಗಲೂ ನಾವು ಎರಡೇ ಕಿಲೋಮೀಟರ್ ಬಂದಿದ್ದಾ? ಹತ್ತಿದ್ದ ರೀತಿ ನೋಡಿದ್ರೆ ನಂಗಂತೂ ಕನಿಷ್ಠ ಐದು ಕಿಲೋಮೀಟರ್ ಅನಿಸತ್ತಪಾ' ಎಂದ, ದೊಡ್ಡ ಏರನ್ನು ಅರ್ಧ ಹತ್ತಿ ನಿಂತುಕೊಂಡು. ಆತ ನಮ್ಮ ಪಯಣ ಶುರುವಾದ ಅರ್ಧ ಕಿಲೋಮೀಟರ್ ದೂರದಿಂದಲೇ ಉಸ್ಸಪ್ಪಾ ಅನ್ನುತ್ತಾ ಇನ್ನೆಷ್ಟು ದೂರ, ಇನ್ನೆಷ್ಟು ದೂರ ಎಂದು ಕೇಳುತ್ತಿದ್ದರಿಂದ ನಾವ್ಯಾರೂ ತಿರುಗಿ ಉತ್ತರಿಸುವ ಗೋಜಿಗೆ ಹೋಗದೆ ನಗುತ್ತಾ ಮುಂದುವರೆದೆವು.

ನಮ್ಮ ಗೈಡು ಪ್ರಮೋದನಿಗೆ ನಮ್ಮಂಥ ಸಾಕಷ್ಟು ಜನರನ್ನು ಸಂಭಾಳಿಸಿ ಅಭ್ಯಾಸವಿದ್ದುದರಿಂದ, 'ಹೆದರಬೇಡಿ, ಇನ್ನೇನು ಜಾಸ್ತಿ ದೂರ ಇಲ್ಲ' ಎಂದು ಸಮಾಧಾನ ಮಾಡಿ ಶ್ರೀವತ್ಸನನ್ನು ಮುಂದೆ ಹೊರಡಿಸಿದ. ಅಶ್ವಿನಿ ಕುಮಾರ್ ಮುಂದೆ ಹೋಗಿ ನೆಲದ ಮೇಲೆ ಹುಟ್ಟಿದ ಯಾವುದೋ ಕೆಂಪು ಬಣ್ಣದ ಅಣಬೆಯ ಫೋಟೊ ತೆಗೆಯುತ್ತಿದ್ದ. ಸಹನಾ ದೂರದಲ್ಲೆಲ್ಲೋ ಕೂಗುತ್ತಿದ್ದ ಗಿಣಿಯ ದನಿ ಅರಸಿ ಅವುಗಳ ಮುಖದರ್ಶನವೇನಾದರೂ ಸಿಗಬಹುದಾ ಎಂದು ಎತ್ತರದ ಮರದ ತುದಿಯನ್ನು ಜಾಲಾಡುತ್ತಿದ್ದಳು. ದಿನೇಶ್ ಮಾನೀರ್ ಕ್ಯಾಮೆರಾವನ್ನು ಬ್ಯಾಗಿನಲ್ಲೇ ಇಟ್ಟುಕೊಂಡು ಜಾಸ್ತಿ ಮಾತಿಲ್ಲದೆ ನಡೆಯುತ್ತಿದ್ದ.

ಹಲವು ಸಲ ಪ್ಲ್ಯಾನ್ ಮಾಡಿ, ವಿಫಲವಾಗಿ ಕೊನೆಗೆ ತಲೆಕೆಟ್ಟು ನಾನೇ ಒಂದು ದಿನ ನಿಗದಿ ಮಾಡಿ ಎಲ್ಲರಿಗೂ ಬರಬೇಕು ಎಂದು ಕಟ್ಟಪ್ಪಣೆ ಮಾಡಿ ಹೊರಡಿಸಿದ ಟ್ರೆಕ್ಕಿಂಗ್ ಇದು. ನಮ್ಮ ಪ್ಲ್ಯಾನ್ ಪ್ರಕಾರ ಅಶ್ವಿನಿ ಕುಮಾರ್, ಶ್ರೀವತ್ಸ, ಸಹನಾ ಮತ್ತು ದಿನೇಶ್ ಮಾನೀರ್ ಹಿಂದಿನ ದಿನ ಸಂಜೆಯೇ 'ಸಿಂಹ ಫಾರ್ಮ್ಸ್' ಹೋಂ ಸ್ಟೇ ಸೇರಿದ್ದರು.

ಅರಿಶಿನಗುಂಡಿ ಜಲಪಾತಕ್ಕೆ ಚಾರಣದ ದಾರಿ ಕೊಲ್ಲೂರಿನಿಂದ ಶುರುವಾಗುತ್ತದೆ. ನಾವು ಬೆಳಿಗ್ಗೆ ಆರು ಗಂಟೆಗೆ ತಯಾರಾಗಿ ಕೊಡಚಾದ್ರಿ ಬುಡದ ನಿಟ್ಟೂರಿನಲ್ಲಿ ತಿಂಡಿ ತಿಂದು ನೇರವಾಗಿ ಕೊಲ್ಲೂರು ಮುಖ್ಯ ಬಸ್ ನಿಲ್ದಾಣದ ಎದುರು ಇರುವ ಅರಣ್ಯ ಇಲಾಖೆ ಕಚೇರಿಗೆ ಹೋಗಿ ಹಣ ತೆತ್ತು ಚಾರಣಕ್ಕೆ ಪರವಾನಗಿಯನ್ನು ಪಡೆದೆವು. ಯಾರೇ